## ನಿಮ್ಮೊಡನೆ

# ಸಾರ್ವಜನಿಕ ಜೀವನದಲ್ಲಿ ಲಜ್ಜೆ ಬೇಡವಾಗಿದೆಯೆ?

> ಒಂದು ಪಕ್ಷದಿಂದ ಆರಿಸಿಬಂದವರು, ಅಧಿಕಾರಕ್ಕಾಗಿ ಮತ್ತೊಂದು ಪಕ್ಷದ ಬಾವುಟ ಹಿಡಿಯುತ್ತಾರೆ. ಈ ಪಕ್ಷಾಂತರ ಕೂಡ ಹಾದರವೇ. ಜನರ ಹಿತಾಸಕ್ತಿ ಮತ್ತು ಸೈದ್ಧಾಂತಿಕ ನಿಷ್ಠೆಗಿಂತಲೂ ವೈಯಕ್ತಿಕ ಲಾಲಸೆಗಳಿಗೆ ಆದ್ಯತೆ ನೀಡುವ ರಾಜಕಾರಣಿಗಳನ್ನು ಮತ್ತೆ ಚುನಾಯಿಸುವ ಮೂಲಕ ಇಂತಹ ಸ್ಥಿತಿ ರೂಪುಗೊಳ್ಳಲು ಪ್ರಜೆಗಳೂ ಕಾರಣರಾಗಿದ್ದಾರೆ.

ಕರ್ನಾಟಕದ ಪ್ರಮುಖ ರಾಜಕಾರಣಿಯೊಬ್ಬರ ‘ಲೈಂಗಿಕ ಹಗರಣ’ ಎಂದು ಹೇಳಲಾಗುತ್ತಿರುವ ಸೀಡಿಯೊಂದು ಬಹಿರಂಗವಾಗಿರುವ ಹಿನ್ನೆಲೆಯಲ್ಲಿ ವ್ಯಕ್ತವಾಗುತ್ತಿರುವ ಅಭಿಪ್ರಾಯಗಳು ಸಾರ್ವಜನಿಕ ಜೀವನದಲ್ಲಿ ಲಜ್ಜೆ ಗೌಣವಾಗುತ್ತಿರುವುದನ್ನು ಸೂಚಿಸುವಂತಿವೆ. ರಾಜಕೀಯ ಸಂಚಿಗೆ ಬಲಿಯಾಗಿರುವ ಅಮಾಯಕನೆಂದು ಆರೋಪಿಯನ್ನು ಬಿಂಬಿಸುವ ಪ್ರಯತ್ನಗಳು ನಡೆಯುತ್ತಿವೆ. ಒಪ್ಪಿತ ಲೈಂಗಿಕತೆ ಅಪರಾಧವಲ್ಲ ಎಂದೂ ಕೆಲವರು ಹೇಳುತ್ತಿದ್ದಾರೆ. ಆರೋಪಿಯ ಚಾರಿತ್ರ್ಯದ ಬಗ್ಗೆ ಪ್ರಮಾಣಪತ್ರ ನೀಡುವಂತೆ ಮಠಾಧೀಶರೊಬ್ಬರು ಮಾತನಾಡಿದ್ದಾರೆ. ಈ ಎಲ್ಲ ಪ್ರತಿಕ್ರಿಯೆಗಳು ಸಾರ್ವಜನಿಕ ಜೀವನದಲ್ಲಿ ಲಜ್ಜೆ ಅಪ್ರಸ್ತುತ ಆಗುತ್ತಿರುವುದಕ್ಕೆ ಉದಾಹರಣೆಯಂತಿವೆ.

ಚಾರಿತ್ರ್ಯವನ್ನು ಶಂಕಿಸುವಂತಹ ಆರೋಪಗಳು ಎದುರಾದಾಗ, ಆ ಪ್ರಕರಣವನ್ನು ಕಾನೂನಿನ ದೃಷ್ಟಿಯಿಂದ ಮಾತ್ರವಲ್ಲದೆ ನೈತಿಕ ದೃಷ್ಟಿಯಿಂದಲೂ ನೋಡುವುದು ಅಗತ್ಯ. ವ್ಯಕ್ತಿಯ ಮೇಲಿನ ಆರೋಪ ನಿಜವೋ ಸುಳ್ಳೋ ಎನ್ನುವುದನ್ನು ನ್ಯಾಯಾಲಯ ತೀರ್ಮಾನಿಸುತ್ತದೆ; ಆ ತೀರ್ಮಾನ ಜನಸಾಮಾನ್ಯರದ್ದಲ್ಲ. ಜನರಿಗೆ ಮುಖ್ಯವಾಗಬೇಕಾಗುದು ನೈತಿಕ ದೃಷ್ಟಿಕೋನ. ಒಪ್ಪಿತ ಲೈಂಗಿಕತೆ ಎಂದಮಾತ್ರಕ್ಕೆ ಅದು ಸಹ್ಯವಾದುದೇನಲ್ಲ. ಸಾರ್ವಜನಿಕ ಜೀವನದಲ್ಲಿರುವವರು ತಮ್ಮ ವ್ಯಕ್ತಿತ್ವಕ್ಕೆ ಮಸಿ ಬಳಿದುಕೊಳ್ಳುವಂಥ ಕೆಲಸಗಳಿಂದ ದೂರವಿರಬೇಕು ಎಂದು ಸಮಾಜ ಬಯಸುತ್ತದೆ. ಸಾರ್ವಜನಿಕ ಹೊಣೆಗಾರಿಕೆಯಲ್ಲಿ ತೊಡಗಿಕೊಂಡವರ ಜೀವನದಲ್ಲಿ ವೈಯಕ್ತಿಕ ಮತ್ತು ಸಾರ್ವತ್ರಿಕದ ನಡುವಿನ ಗೆರೆ ಅತ್ಯಂತ ತೆಳುವಾಗಿರುತ್ತದೆ. ಇಂಥ ಸಂದರ್ಭದಲ್ಲಿ ಸಚಿವರೊಬ್ಬರು ವಿವಾಹೇತರ ಸಂಬಂಧದಲ್ಲಿ ಗುರ್ತಿಸಿಕೊಂಡರೆ ಅದನ್ನು ವೈಯಕ್ತಿಕ ಎನ್ನಲಾಗುವುದಿಲ್ಲ. ಅಂಥ ನಡವಳಿಕೆ ಸರ್ಕಾರಕ್ಕೆ ಕಳಂಕ ತರುವಂತಹದ್ದು ಹಾಗೂ ಚುನಾಯಿಸಿದ ಮತದಾರರ ನಂಬಿಕೆಗೆ ದ್ರೋಹ ಬಗೆಯುವಂತಹದ್ದು.

ವೈಯಕ್ತಿಕ ಜೀವನದಲ್ಲಿ ಲಜ್ಜೆ ಎನ್ನುವುದು ಒಂದು ಲಕ್ಷಣ ಅಥವಾ ವಿಶೇಷವಾಗಿದ್ದರೆ, ಸಾರ್ವಜನಿಕ ಜೀವನದಲ್ಲಿ ಅದಕ್ಕೆ ಮೌಲ್ಯದ ರೂಪದಲ್ಲಿ ಮಹತ್ವವಿದೆ. ಆದರ್ಶ ನಾಯಕರೆಂದು ಚರಿತ್ರೆ ಕಟ್ಟಿಕೊಟ್ಟಿರುವ ಎಲ್ಲ ನಾಯಕರೂ ತಮ್ಮ ಸಾರ್ವಜನಿಕ ಜೀವನದಲ್ಲಿ ಲಜ್ಜೆಗೆ ಮಹತ್ವ ಕೊಟ್ಟವರೇ ಆಗಿದ್ದಾರೆ. ಇಂಥ ನಾಯಕರಿಗೆ ರಾಮಾಯಣದ ಶ್ರೀರಾಮ ಮೇಲ್ಪಂಕ್ತಿಯಾದವನು. ಪತ್ನಿಯ ಚಾರಿತ್ರ್ಯದ ಬಗ್ಗೆ ವೈಯಕ್ತಿಕವಾಗಿ ನಂಬಿಕೆಯಿದ್ದರೂ, ಸೀತೆ ಅಗ್ನಿಪರೀಕ್ಷೆಗೆ ಒಳಪಡುವ ಮೂಲಕ ಲೋಕದ ಕಣ್ಣಿಗೆ ತನ್ನ ಪಾವಿತ್ರ್ಯವನ್ನು ಸಾಬೀತುಪಡಿಸಬೇಕೆಂದು ರಾಮ ಒತ್ತಾಯಿಸಿದ. ಪ್ರಜೆಯೊಬ್ಬ ತನ್ನ ಪತ್ನಿಯ ಬಗ್ಗೆ ಲಘುವಾಗಿ ಮಾತನಾಡಿದ್ದನ್ನು ಗಂಭೀರವಾಗಿ ಪರಿಗಣಿಸಿ, ಸೀತೆಯನ್ನು ತ್ಯಜಿಸಿದ. ಅದು ಕಟು ನಿಷ್ಠುರವಾದ ನೈತಿಕತೆ. ಅದರಲ್ಲಿ ಕನಿಷ್ಠ ಒಂದಂಶವಾದರೂ ಇಂದಿನ ರಾಜಕಾರಣಿಗಳಿಗೆ ಇದ್ದಂತಿಲ್ಲ. ಇದ್ದಿದ್ದರೆ ಆರೋಪಕ್ಕೆ ತುತ್ತಾದ ವ್ಯಕ್ತಿಯ ಬಗ್ಗೆ ಸಹಾನುಭೂತಿ ಸಮರ್ಥನೆಗಳು ವ್ಯಕ್ತವಾಗುತ್ತಿರಲಿಲ್ಲ. ಪ್ರಕರಣ ಇತ್ಯರ್ಥ ಆಗುವವರೆಗೆ ಬೀಸು ಹೇಳಿಕೆಗಳನ್ನು ನೀಡಬಾರದು ಎನ್ನುವ ಸಾಮಾನ್ಯಜ್ಞಾನವೂ ಇಂದಿನ ರಾಜಕಾರಣಕ್ಕೆ ದುಬಾರಿ ಆಗಿರುವಂತಿದೆ. ಜವಾಬ್ದಾರಿಯುತ ಸ್ಥಾನಗಳಲ್ಲಿ ಇರುವವರೇ ಲಜ್ಜೆಗೇಡಿಗಳಾಗಿ ವರ್ತಿಸಿದರೆ, ಜನಸಾಮಾನ್ಯರ ಪಾಡೇನು?

ಸಾರ್ವಜನಿಕ ಲಜ್ಜೆ ಅಥವಾ ನೈತಿಕತೆ ಎನ್ನುವುದು ಸಮಕಾಲೀನ ರಾಜಕಾರಣದಲ್ಲಿ ಮತ್ತೆ ಮತ್ತೆ ಮುಗ್ಗರಿಸುತ್ತಿದೆ, ನಗೆಪಾಟಲಿಗೆ ಈಡಾಗುತ್ತಿದೆ. ಒಂದು ಪಕ್ಷದ ಹೆಸರಲ್ಲಿ ಜನರಿಂದ ಆರಿಸಿಬಂದವರು, ಅಧಿಕಾರಕ್ಕಾಗಿ ಮತ್ತೊಂದು ಪಕ್ಷದ ಬಾವುಟ ಹಿಡಿಯುತ್ತಾರೆ. ಈ ಪಕ್ಷಾಂತರ ಕೂಡ ಹಾದರವೇ. ಜನರ ಹಿತಾಸಕ್ತಿ ಮತ್ತು ಸೈದ್ಧಾಂತಿಕ ನಿಷ್ಠೆಗಿಂತಲೂ ವೈಯಕ್ತಿಕ ಲಾಲಸೆಗಳಿಗೆ ಆದ್ಯತೆ ನೀಡುವ ರಾಜಕಾರಣಿಗಳನ್ನು ಮತ್ತೆ ಮತ್ತೆ ಚುನಾಯಿಸುವ ಮೂಲಕ ಅನೈತಿಕತೆಯೇ ನೈತಿಕತೆ ಎನ್ನುವಂತಹ ಸ್ಥಿತಿ ರೂಪುಗೊಳ್ಳಲು ಪ್ರಜೆಗಳೂ ಕಾರಣರಾಗಿದ್ದಾರೆ. ಮರ್ಯಾದಸ್ಥರು, ನೈತಿಕ ಮೌಲ್ಯಗಳ ಬಗ್ಗೆ ನಂಬಿಕೆಯುಳ್ಳವರು ಚುನಾವಣೆಯಲ್ಲಿ ಸ್ಪರ್ಧಿಸುವುದೇ ಅಸಾಧ್ಯ ಎನ್ನುವಂತಾಗಿದೆ. ‘ತತ್ವರಹಿತ ರಾಜಕಾರಣ’ ಸಪ್ತ ಮಹಾಪಾತಕಗಳಲ್ಲಿ ಒಂದೆಂದು ಗಾಂಧೀಜಿ ಪ್ರತಿಪಾದಿಸಿದರು. ಮಹಾತ್ಮನ ಬದುಕು–ಸಾಧನೆಯನ್ನೇ ಅಪ್ರಸ್ತುತ ಮಾಡಿರುವ ಸಮಕಾಲೀನ ರಾಜಕಾರಣ, ಗಾಂಧಿಯ ವಿಚಾರಗಳನ್ನು ಉಳಿಸಿಕೊಳ್ಳುವುದು ಸಾಧ್ಯವೇ? ಈ ಹೊತ್ತಿನ ರಾಜಕಾರಣದ ತತ್ವವೊಂದೇ: ಹಣವನ್ನು ಚೆಲ್ಲುವುದು, ಹಣವನ್ನು ಬೆಳೆಯುವುದು.

ಕೊರೊನಾ ಲಾಕ್‌ಡೌನ್ ಸಮಯದಲ್ಲಿ ವಿಶ್ವನಕಾಶೆಯಲ್ಲಿ ಗುರ್ತಿಸಿಕೊಂಡಿರುವ ಸಿರಿವಂತರ ಶ್ರೀಮಂತಿಕೆಯ ಬೊಜ್ಜು ಮತ್ತಷ್ಟು ಹೆಚ್ಚಾಗಿದೆ ಹಾಗೂ ಕುಬೇರರ ಸಂಖ್ಯೆಯಲ್ಲಿ ಏರಿಕೆಯಾಗಿದೆ ಎಂದು ಸಮೀಕ್ಷೆಯೊಂದು ಹೇಳುತ್ತಿದೆ. ಕೊರೊನಾ ಪಿಡುಗಿನ ಸಂದರ್ಭದಲ್ಲಿ ದೇಶದ ಆರ್ಥಿಕತೆಯೇ ಏರುಪೇರಾಗಿ, ಜನಸಾಮಾನ್ಯರ ದೈನಿಕದ ಲಯ ತಪ್ಪಿರುವಾಗ, ಇನ್ನೊಂದೆಡೆ ಶ್ರೀಮಂತಿಕೆಯ ಗ್ರಾಫ್ ಏರುಮುಖದಲ್ಲಿರುವುದನ್ನು ಏನೆಂದು ಅರ್ಥೈಸುವುದು? ನವಭಾರತದ ಈ ವೈರುಧ್ಯ ಕೂಡ ‘ಸಾರ್ವಜನಿಕ ಲಜ್ಜೆ’ ಕ್ಷೀಣಿಸುತ್ತಿರುವುದಕ್ಕೆ ಒಂದು ಉದಾಹರಣೆ ಅಲ್ಲವೇ? ಗಾಂಧೀಜಿ ಪಟ್ಟಿ ಮಾಡಿದ ಪಾತಕಗಳಲ್ಲಿ ‘ನೀತಿಹೀನವಾದ ವಾಣಿಜ್ಯ’ವೂ ಒಂದು.

**■ ರಘುನಾಥ ಚ.ಹ.**



ಈಶ್ವರ್